ಅನುದಾನ ರಹಿತ	19	1	4	11	9	9
ಒಟ್ಟು	**22**	**1**	**57**	**11**	**22**	**9**

521(864) ಶ್ರೀ ಪದ್ಮನಾಭ ಕೊಟ್ಟಾರಿ ಕೆ (ವಿಟ್ಲ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ರಾಜ್ಯದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ನೀಡುತ್ತಿರುವ ಬಿಸಿಯೂಟ, ಸಮವಸ್ತ್ರ ಮತ್ತು ಉಚಿತ ಪುಸ್ತಕ ನೀಡಿಕೆಯ ಯೋಜನೆಯ ಸೌಲಭ್ಯವನ್ನು ಅನುದಾನಿತ ಶಾಲಾ ಮಕ್ಕಳಿಗೂ ವಿಸ್ತರಿಸುವುದು ಸರಕಾರದ ಗಮನದಲ್ಲಿದೆಯೇ,

ಆ) ಇದ್ದಲ್ಲಿ, ಸರಕಾರಿ ಶಾಲೆಗಳು ಇಲ್ಲದ ಹಾಗೂ ಉತ್ತಮ ಶೈಕ್ಷಣಿಕ ಸೌಲಭ್ಯವನ್ನು ನೀಡಿಕೊಂಡು ಬರುತ್ತಿರುವ ಅನುದಾನಿತ ಶಾಲಾ ಮಕ್ಕಳಿಗೂ ಎಲ್ಲಾ ಸೌಲಭ್ಯಗಳನ್ನು ವಿಸ್ತರಿಸುವ ಮೂಲಕ ಶಾಲಾ ಮಕ್ಕಳಲ್ಲಿ ಬೇದಭಾವಗಳನ್ನು ಹೋಗಲಾಡಿಸಲು ಶೀಘ್ರ ನಿರ್ಧಾರವನ್ನು ಸರಕಾರ ಕೈಗೊಳ್ಳುವುದೇ?

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ದಿ 19 2004 ರಿಂದ ಸರ್ಕಾರಿ ಅನುದಾನಿತ 1 ರಿಂದ 5ರ ತರಗತಿಯ ಶಾಲಾ ಮಕ್ಕಳಿಗೆ ಹಾಗೂ ದಿ 1 10 2004 ರಿಂದ ಸರ್ಕಾರಿ ಅನುದಾನಿತ 6 ಮತ್ತು 7ನೇ ತರಗತಿಯ ಶಾಲಾ ಮಕ್ಕಳಿಗೆ ಬಿಸಿಯೂಟ ಯೋಜನೆಯನ್ನು ವಿಸ್ತರಿಸಲಾಗಿರುತ್ತದೆ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

522(865) ಶ್ರೀ ಕೆ ಪದ್ಮನಾಭ ಕೊಟ್ಟಾರಿ (ವಿಟ್ಲ) ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆಯಲ್ಲಿ ಬಳಸಲಾಗುವ ಮಾನದಂಡಗಳೇನು, ಮೊದಲು ಬಳಸುತ್ತಿದ್ದ 14 ಅಂಕಗಳಾಧಾರಿತ ಮಾನದಂಡಗಳನ್ನು ಕೈಬಿಡಲಾಗಿದೆಯೇ,

ಆ) ಅರ್ಹ ಕುಟುಂಬಗಳನ್ನು ಸಮೀಕ್ಷೆ ಮಾಡುವಲ್ಲಿ ಉಂಟಾದ ಲೋಪದೋಷಗಳ ವಿವರಗಳೇನು, ಈ ಕುರಿತು ಸಮರ್ಪಕ ಆಯ್ಕೆ ವಿಧಾನಕ್ಕೆ ಸರ್ಕಾರದ ಕ್ರಮಗಳೇನು,

ಇ) 2005–06 ಮತ್ತು 2006–07ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿತರಿಸಲಾದ ಆಶ್ರಯ ಮನೆಗಳ ಹಂಚಿಕೆಯ ಬಗ್ಗೆ ತಾಲ್ಲೂಕುವಾರು ವಿವರಗಳನ್ನು ನೀಡುವುದು,

ಈ) ವಸತಿ ಹಾಗೂ ನಿವೇಶನ ರಹಿತರನ್ನು ಗುರುತಿಸುವ ಕಾರ್ಯ ನಡೆದಿದೆಯೇ, ಹೌದಾದಲ್ಲಿ ಆ ಕುರಿತು ವಿವರಗಳು ಹಾಗೂ ಅವರುಗಳಿಗೆ ನಿವೇಶನಗಳನ್ನು ಹಂಚಲು ಸರ್ಕಾರದ ಕ್ರಮಗಳೇನು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಆಶ್ರಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಆಯ್ಕೆಯಲ್ಲಿ ಈ ಕೆಳಗೆ ತಿಳಿಸಿರುವ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ

1 ಗ್ರಾಮೀಣ ವಸತಿ ಯೋಜನೆಗಳಡಿಯಲ್ಲಿ ಫಲಾನುಭವಿ ಕರ್ನಾಟಕ ರಾಜ್ಯದ ಪ್ರಜೆಯಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರಬೇಕು ಮತ್ತು ಗ್ರಾಮ ಪಂಚಾಯತಿಯ ನಿವೇಶನ ರಹಿತ/ವಸತಿ ರಹಿತರ ಪಟ್ಟಿಯಲ್ಲಿ ಸೇರಿರಬೇಕು ಹಾಗೂ ವಸತಿಗಾಗಿ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಅರ್ಜಿಗಳ ಮತ್ತು ಫಲಾನುಭವಿಗಳ ರಿಜಿಸ್ಟರ್‌ನಲ್ಲಿ ಸೇರ್ಪಡೆಯಾಗಿರಬೇಕು

2 ನಗರ ವಸತಿ ಯೋಜನೆಗಳಡಿಯಲ್ಲಿ ಫಲಾನುಭವಿ ಕರ್ನಾಟಕ ರಾಜ್ಯದ ಪ್ರಜೆಯಾಗಿದ್ದು, ನಗರ ಪ್ರದೇಶದಲ್ಲಿ ವಾಸವಾಗಿರಬೇಕು ಮತ್ತು ಸ್ಥಳೀಯ ಸಂಸ್ಥೆಗಳ ನಿವೇಶನರಹಿತ/ವಸತಿರಹಿತರ ಪಟ್ಟಿಯಲ್ಲಿ ಸೇರಿರಬೇಕು ಹಾಗೂ ವಸತಿಗಾಗಿ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಅರ್ಜಿಗಳ ಮತ್ತು ಫಲಾನುಭವಿಗಳ ರಿಜಿಸ್ಟರ್‌ನಲ್ಲಿ ಸೇರ್ಪಡೆಯಾಗಿರಬೇಕು

3 ಫಲಾನುಭವಿಯು ಆರ್ಥಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಬಡತನ ರೇಖೆಗಿಂತ ಕೆಳಗಿರುವವರಿಗೆ ನಿಗದಿಪಡಿಸಿರುವ ಮಿತಿಗಿಂತ ಕಡಿಮೆ ಇರಬೇಕು

4 ಮನೆ/ನಿವೇಶನ ಹಕ್ಕು ಪತ್ರವನ್ನು ಮಹಿಳೆಯರ ಹೆಸರಿನಲ್ಲಿಯೇ ವಿತರಿಸಬೇಕು ಒಂದು ವೇಳೆ ಅಂಗವಿಕಲರು, ಮಾಜಿ ಸೈನಿಕರು, ಏಕ ಮಹಿಳಾ ಒಡೆತನ, ಹಿರಿಯ ನಾಗರೀಕರು ಮತ್ತು ವಿಧುರರು ಆಯ್ಕೆಯಾಗಿದ್ದಲ್ಲಿ ಅವರ ಹೆಸರಿನಲ್ಲಿ ಹಕ್ಕು ಪತ್ರ ವಿತರಿಸಬಹುದು

5 ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು

6 ನಿಯಮಾನುಸಾರ ಪರಿಶಿಷ್ಟ ಜಾತಿ/ಪಂಗಡದವರಿಗೆ ಮೀಸಲಾಗಿ ಇರುತ್ತದೆ

7 ಅಂಕಗಳಾಧಾರಿತ ಮಾನದಂಡಗಳನ್ನು ಆಶ್ರಯ ಯೋಜನೆಯಡಿಯಲ್ಲಿ ಕೈಬಿಡಲಾಗಿದೆ

ಆ) ಜೂನ್ 2003ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಸಭೆಗಳ ಮೂಲಕ ಮತ್ತು ನಗರ ಪ್ರದೇಶಗಳಲ್ಲಿ ಸ್ಥಳೀಯ ಸಂಸ್ಥೆಗಳು ವಾರ್ಡ್ ಸಭೆಗಳ ಮೂಲ್ಕಕ ವಸತಿ ರಹಿತ ಮತ್ತು ನಿವೇಶನ ರಹಿತ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ ಹೀಗೆ ಆಯ್ಕೆಯಾದ ಫಲಾನುಭವಿಗಳು ಅನರ್ಹರೆಂದು ಕಂಡುಬಂದಲ್ಲಿ ಅಂತಹ ಫಲಾನುಭವಿಗಳನ್ನು ಕೈಬಿಡಲು ಅವಕಾಶವಿರುತ್ತದೆ. ಅರ್ಹಫಲಾನುಭವಿಗಳು ಕೈಬಿಟ್ಟು ಹೋದಲ್ಲಿ ಅಂತಹ ಫಲಾನುಭವಿಗಳ ವಿವರಗಳನ್ನು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯವರು ಪರಿಶೀಲಿಸಿ ಜಿಲ್ಲೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅನುಮೋದನೆಯೊಂದಿಗೆ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ಅವಕಾಶ ನೀಡಲಾಗಿರುತ್ತದೆ

ಇ) 2005–06 ಮತ್ತು 2006–07ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 20300 ಆಶ್ರಯ ಮನೆಗಳನ್ನು ಹಂಚಿಕೆ ಮಾಡಲಾಗಿರುತ್ತದೆ

ತಾಲ್ಲೂಕುವಾರು ವಿವರವನ್ನು ಅನುಬಂಧ 'ಅ'ದಲ್ಲಿ ನೀಡಲಾಗಿದೆ

ಈ) ಸ್ಥಳೀಯ ಸಂಸ್ಥೆಗಳ ಮುಖಾಂತರ ಜೂನ್ 2003ರಲ್ಲಿ ವಸತಿ ರಹಿತರ ಸಮೀಕ್ಷೆಯನ್ನು ಮಾಡಲಾಗಿದ್ದು ಈ ಸಮೀಕ್ಷೆಯ ಪ್ರಕಾರ

ಗುಡಿಸಲುಗಳಲ್ಲಿ ವಾಸಿಸುವವರನ್ನು ಒಳಗೊಂಡಂತೆ ರಾಜ್ಯದಲ್ಲಿ ಈ ಕೆಳಗಿನಂತೆ ವಸತಿರಹಿತ ಮತ್ತು ನಿವೇಶನರಹಿತರ ಸಂಖ್ಯೆ ಇರುತ್ತದೆ

ಪ್ರದೇಶ	ವಸತಿ ರಹಿತರು	ನಿವೇಶನ ರಹಿತರು	ಒಟ್ಟು
ಗ್ರಾಮೀಣ	1226345	1042986	2269331
ನಗರ	73444	255827	329271
ಒಟ್ಟು	**12997789**	**1298813**	**2598602**

ಈ ಸಮೀಕ್ಷೆಯ ನಂತರ 2003–04 ರಿಂದ 2006–07ನೇ ಸಾಲಿನ ವರೆಗೆ ಒಟ್ಟು 28417 ನಿವೇಶನಗಳನ್ನು ಹಂಚಲಾಗಿರುತ್ತದೆ

523(940) ಶ್ರೀ ಪಾಟೀಲ್ ಡಿ ಆರ್ (ಗದಗ್) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಗ್ರಾಮ ಸಭೆಗಳನ್ನು ಇನ್ನಷ್ಟು ಪರಿಣಾಮಕಾರಿ ಮಾಡಲು ಹಾಗೂ ಅದರ ಮೂಲಕ ಗ್ರಾಮ ಪಂಚಾಯತ್ ವ್ಯವಸ್ಥೆಯಲ್ಲಿ ಪಾರದರ್ಶಕ ಆಡಳಿತ ನಡೆಸಲು ಸರಕಾರ ಯೋಚಿಸಿರುವ ಕಾರ್ಯಕ್ರಮಗಳೇನು,

ಆ) ಅವುಗಳನ್ನು ಹೇಗೆ ಅನುಷ್ಠಾನಗೊಳಿಸಲಾಗುವುದು,

ಇ) ಪಂಚಾಯತ್ ವ್ಯಾಪ್ತಿಯಲ್ಲಿ ನಡೆಯುವ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳಿಗೆ ವಿನಿಯೋಗಿಸುವ ಹಣದ ಲೆಕ್ಕಾಚಾರವೆಲ್ಲ ಗ್ರಾಮ ಸಭೆಯ ಮುಂದೆ ಪರಾಮರ್ಶೆಗೆ ಬರುವ ಹಾಗೆ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಈಗಾಗಲೇ ಗ್ರಾಮ ಸಭೆ ನಡೆಸುವುದನ್ನು ಶಾಸನಬದ್ಧ ಜವಾಬ್ದಾರಿಯೆಂದು ಕಡ್ಡಾಯಗೊಳಿಸಲಾಗಿದೆ ಈ ಬಗ್ಗೆ ಗ್ರಾಮ ಪಂಚಾಯತಿಗಳಿಗೆ ಸೂಚನೆ ನೀಡಲಾಗಿದೆ ಗ್ರಾಮ ಸಭೆಗಳನ್ನು ನಡೆಸುವ ಬಗ್ಗೆ ಮಾರ್ಗಸೂಚಿಗಳನ್ನು ಸಹ ನೀಡಲಾಗಿದೆ